ಹರಿಹರ ತಾಲ್ಲೂಕಿನ ಪ್ರಾಥಮಿಕ ಶಾಲೆಯಲ್ಲಿರುವ ಖಾಲಿ ಹುದ್ದೆಗಳು

೩೮೬. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಸಂಖ್ಯೆ ಎಷ್ಟು ?

ಶ್ರೀ ಎಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೨೪.

ಶ್ರೀ ಬಿ. ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಕೇವಲ ೨೪ ಜನ ಉಪಾಧ್ಯಾಯರನ್ನು ಭರ್ತಿ ಮಾಡತಕ್ಕಂಥ ವಿಷಯವನ್ನು ಮಾನ್ಯ ವಿದ್ಯಾಮಂತ್ರಿಗಳು ಹೇಳಿದ್ದಾರೆ. ನಾನು ಈ ತಾಲ್ಲೂಕಿನಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದೆ, ಉಪಾಧ್ಯಾಯರ ಸಂಖ್ಯೆ ಕಡಿಮೆ ಇದೆ ಎಂಬ ವಿಚಾರದ ಬಗ್ಗೆ ಹಾಗೂ ಉಪಾಧ್ಯಾಯರು ಬೇಕು ಎಂದು ಹೇಳಿ ಕಳಿಸಿದ್ದರೂ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಪರೀಕ್ಷೆ ಕಾಲ ಹತ್ತಿರ ಬರುತ್ತಾ ಇದೆ. ಉಪಾಧ್ಯಾಯರನ್ನು ಇನ್ನೂ ಭರ್ತಿ ಮಾಡಿಲ್ಲ. ಪಾಠಪ್ರವಚನಗಳು ಸರಿಯಾಗಿ ನಡೆದಿಲ್ಲ, ಆದುದರಿಂದ ಈ ವಿಚಾರದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಅಧ್ಯಕ್ಷರೇ, ಬಹುಶಃ ಈ ವರ್ಷ ಪಠ್ಯಪುಸ್ತಕಗಳನ್ನೂ, ಸಮವಸ್ತ್ರಗಳನ್ನೂ ಫ್ರೀಯಾಗಿ ಕೊಟ್ಟಿದ್ದರಿಂದ, ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೂ ಬಂದಿದೆ, ಇಲಾಖೆಯ ಗಮನಕ್ಕೂ ಬಂದಿದೆ. ೧೯೮೬-೮೭ನೇ ಸಾಲಿನಲ್ಲಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕೆಂಬ ಬಗ್ಗೆ ಸರ್ಕಾರದಲ್ಲಿ ವ್ಯವಹಾರ ನಡೆದಿದೆ. ಆದಷ್ಟು ಬೇಗ ಈ ಕೆಲಸ ಮಾಡುತ್ತೇವೆ.

ಕಾಪು ಕ್ಷೇತ್ರಕ್ಕೆ ಪಾಲಿಟೆಕ್ನಿಕ್ ಮಂಜೂರು ಮಾಡುವುದು

೪೦೨. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಾಪು ಕ್ಷೇತ್ರಕ್ಕೆ ಒಂದು ಪಾಲಿಟೆಕ್ನಿಕ್ ಮಂಜೂರು ಮಾಡುವಂತೆ ಕೇಳಿಕೊಂಡಿರುವ, ಸಂಬಂಧಪಟ್ಟ ಇಲಾಖೆಯವರು ಮಂಜೂರು ಮಾಡದಿರಲು ಕಾರಣವೇನು, ಹಾಗೂ ಅದನ್ನು ಯಾವಾಗ ಮಂಜೂರು ಮಾಡಲಾಗುವುದು.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

(ಅ) ಸದ್ಯದಲ್ಲಿ ಸರ್ಕಾರಿ ವಲಯದಲ್ಲಿ ಯಾವುದೇ ಪಾಲಿಟೆಕ್ನಿಕ್ ತೆರೆಯುವ ವಿಚಾರ ಸರ್ಕಾರಕ್ಕೆ ಇಲ್ಲ

ಶ್ರೀ ಬಿ. ಜಿ. ಕೊಟ್ರಪ್ಪ (ಮಾನ್ಯ ವಸಂತ ಸಾಲಿಯಾನ ಪರವಾಗಿ).—ಮಾನ್ಯ ಅಧ್ಯಕ್ಷರೇ, ನವ್ಮ ಕ್ಷೇತ್ರ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿ ಹಲವಾರು ಸೀಯರ್ ಕಾಲೇಜು ಮತ್ತು ಕಾಲೇಜುಗಳು ಇರುವುದರಿಂದ ಅಲ್ಲಿ ಒಂದು ಖಾಸಗೀ ಸಂಸ್ಥೆಯವರು ಒಂದು ಪಾಲಿಟೆಕ್ನಿಕ್ ಅನ್ನು ತೆರೆಯುವುದಕ್ಕೆ ಮುಂದೆ ಬಂದಿದ್ದಾರೆ. ಅವರಿಗೆ ಆದಷ್ಟು ಬೇಗ ಅನುಮತಿಯನ್ನು ಸರ್ಕಾರದವರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ನಿಯಮಾವಳಿ ಪ್ರಕಾರ ಅವರು ಅಪ್ಲಿಕೇಷನ್ ಹಾಕಕೊಂಡು, ಆ ಅಪ್ಲಿಕೇಷನ್ ಸರಿಯಾಗಿ ಇದೆ ಎನ್ನುವುದಾದರೆ ಅದಕ್ಕೆ ಅಡ್ಡಿ ಬರುವುದಿಲ್ಲ. ನಿಯಮಾವಳಿ ಪ್ರಕಾರ ಸರಿಯಾಗಿ ಇದ್ದರೆ ಕೊಡುತ್ತೇನೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಅವರ ತಿಪ್ಪ್ಲಿಕೇಷನ್ ಸರಿಯಾಗಿ ಇದ್ದರೆ ಕೊಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆಲ್ಲಾ. ದಯವಿಟ್ಟು ಕೂತುಕೊಳ್ಳಿ,

ವಕ್ಫ್ ಮಂಡಲಿಯ ಅಧೀನದಲ್ಲಿ ಬರುವ ಎಲ್ಲ ತರಹದ ವ್ಯವಹಾರದ ಬಗೆ

೪೧೭. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮಿಣಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಆದರಲ್ಲೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ವಕ್ಫ್ ಮಂಡಳಿಯ ಅಧೀನದಲ್ಲಿ ಬರುವ ಒಟ್ಟಾರೆ ಆಸ್ತಿಯ ಮೊತ್ತವೆಷ್ಟು ?

(ಆ) ವಕ್ಫ್ ಮಂಡಳಿಯ ಆಸ್ತಿಯನ್ನು ಬೇರೆಯವರಿಗೆ ಕಾನೂನನ್ನು ಉಲ್ಲಂಘಿಸಿ ಆಸ್ತಿಯನ್ನು ಮಾರಿದ್ದು ಸರ್ಕಾರದರ ಗಮನಕ್ಕೆ ಬಂದಿದೆಯೆ ?

(ಇ) ವಕ್ಫ್ ಮಂಡಳಿ ಸ್ಥಾಪನೆ ಆದ ಮೇಲೆ ಇಲ್ಲಿಯವರೆಗೆ ನೇಮಕಾತಿಗೊಂಡಿರುವ ಮಂಡಳಿದ ಸದಸ್ಯರು ಹಾಗೂ ಅಧ್ಯಕ್ಷರ ಹೆಸರುಗಳೇನು ?

(ಈ) ರಾಜ್ಯದ ಹೊರಗಡೆ ವಕ್ಫ್ ಮಂಡಳಿಯ ಆಸ್ತಿಯನ್ನು ಯಾವ ಯಾವ ಸ್ಥಳದಲ್ಲಿ ಎಷ್ಟು ಎಷ್ಟು ಮೌಲ್ಯದ ಬೇರೆಯವರಿಂದ ಲೂಟಿ ಮಾಡಿದ್ದು ಹಾಗೂ ಆ ಬಗ್ಗೆ ಸರ್ಕಾರಿಂದ ಅವರ ಮೇಲೆ ತೆಗೆದುಕೊಂಡಿರುವ ಕ್ರಮವೇನು ?

(ಉ) ಸಾರ್ವಜನಿಕ ಆಸ್ತಿಯನ್ನು ಲೂಟಿ ಹೊಡೆದಿದ್ದು ತನಿಖೆ ಮಾಡಲು ಲೋಕಾಯುಕ್ತರಿಗೆ ವಹಿಸಿಕೊಡುವುದಕ್ಕಾಗಿ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ, ಪಂಚಾಯಿತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು).—

(ಅ) ರೂಪಾಯಿ : ೮೦ ಕೋಟಿ
ರೂಪಾಯಿ : ೫,೮೬,೫೬,೪೬೨, ಬೆಂಗಳೂರಿನಲ್ಲಿ

(ಆ) ಹೌದು

(ಇ) ತಃಖ್ತೆ ಲಗತ್ತಿಸಲಾಗಿದೆ

(ಈ) ಇಲ್ಲ

(ಉ) ವಕ್ಫ್ ವಿಚಾರಣಾ ಸಮಿತಿಯನ್ನು ನಿಯೋಜಿಸಲು ಪ್ರಸ್ತಾವಿಸಲಾಗಿದೆ.

ವಕ್ಫ್ ಮಂಡಳಿ ಸ್ಥಾಪನೆ ಆದ ಮೇಲೆ ಇಲ್ಲಿಯವರೆಗೆ ನೇಮಕಾತಿಗೊಂಡಿರುವ ಮಂಡಳಿದ ಸದಸ್ಯರು ಹಾಗೂ ಅಧ್ಯಕ್ಷರ ಹೆಸರುಗಳ ತಃಖ್ತೆ

ಮೊದಲನೇಯ ಮಂಡಳಿ ... ಜೂನ್ ೧೯೬೧ ರಿಂದ ಡಿಸೆಂಬರ್ ೧೯೬೬

ಶ್ರೀಯುತರು

೧ ಮಹಮೂದ್ ಶರೀಫ್
೨ ಅಹ್ಮದ್ ಅಲಿ ಖಾನ್, ಮೈಸೂರು
೩ ಮಹ್ಮದ್ ಇನಾಯತ್, ಬಂಗಾರಪೇಟೆ, ಕೋಲಾರ
೪ ಶಫಿಯುದ್ದಿನ್ ಅಹ್ಮದ್, ಬೀದರ್
೫ ಸೈಯದ್ ಈಸಾ, ರಾಯಚೂರು
೬ ಪಿ. ಮೊಹಿದ್ದಿನ್, ಮಂಡಕೇರಿ
೭ ಆರ್. ಎಚ್. ಗೋಡ್‌ವಾಲಾ, ಹುಬ್ಬಳ್ಳಿ